# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 257/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಎಂ.ಎಸ್.ರಾಜ್ ಕುಮಾರ್ | *ಪ್ರಮಾಣ ಮಾಡಿಸಿದ ದಿನಾಂಕಃ* | |
| ತಂದೆ/ಗಂಡನ ಹೆಸರು | ಃ ಶ್ರೀ ಎಂ.ಕೆ.ಸುಬ್ಬರಾಜ್ | **05.12.2024** | |
| ವಯಸ್ಸು | ಃ 67 ವರ್ಷ | | |
| ವೃತ್ತಿ | ಃ ನಾಟಿ ವೈದ್ಯರು | ಪ್ರಾ.ಸಾ. | ಃ 04 |
| ವಾಸಸ್ಥಳ | ಃ ರಾಮಾನುಜ ರೋಡ್, ಮೈಸೂರು | ಚಾ.ಸಾ. | ಃ 09 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಚಾ.ಸಾ–*1* ನನ್ನ ಮಗನಿರುತ್ತಾನೆ. ಈ ಪ್ರಕರಣದ ಆರೋಪಿತರಾದ ಅಂಬರೀಷ್ ಮತ್ತು ಸುರೇಶ್ ಸ್ವಾಮಿ ಅಲಿಯಾಸ್ ಸ್ವಾಮಿ ಇವರ ಪರಿಚಯ ಇಲ್ಲ. ನನ್ನ ಮಗನಿಗೆ ಯಾರು ಯಾವಾಗ ಹೊಡೆದಿದ್ದರು ಎಂದು ಗೊತ್ತಿಲ್ಲ. ನನ್ನ ಮಗ ಯಾವತ್ತು ಬೇರೆಯವರು ಹೊಡೆದಿದ್ದರಿಂದ ಗಾಯಗೊಂಡು ಮನೆಗೆ ಬಂದಿದ್ದನ್ನು ನಾನು ನೋಡಿಲ್ಲ ಮತ್ತು ಆ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ನನ್ನ ಮಗ ಹೊಡೆದಾಟದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಗೊತ್ತಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ದಿಃ*04.10.2020* ರಂದು ರಾತ್ರಿ *9* ಗಂಟೆಗೆ ಪವನ್ ಕುಮಾರ್ ಮತ್ತು ರಮೇಶ್ ಇವರು ನನ್ನ ಮಗನನ್ನು ನೋಡಲು ನನ್ನ ಮನೆಗೆ ಬಂದು ನನ್ನ ಮಗನೊಂದಿಗೆ ಮಾತನಾಡಿ ರಾತ್ರಿ *12* ಗಂಟೆಗೆ ಅವರೆಲ್ಲರೂ ಟೀ ಕುಡಿಯಲು ಹೋಗಿದ್ದರು ಎಂದರೆ ಸರಿಯಲ್ಲ. ಆ ದಿನ ಮಧ್ಯರಾತ್ರಿ *2* ಗಂಟೆಗೆ ನನ್ನ ಮಗ ಮನೆಗೆ ವಾಪಸ್ಸು ಬಂದಾಗ ಅವನ ಮುಖಕ್ಕೆ ಗಾಯವಾಗಿ ಬಟ್ಟೆಗೆ ರಕ್ತ ಹತ್ತಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ಮಗನನ್ನು ವಿಚಾರಿಸಿದಾಗ ಜೆ.ಎಸ್.ಎಸ್ ಆಸ್ಪತ್ರೆಯ ಬಳಿ ಬರುವಾಗ ಅಂಬರೀಷ್ ಮತ್ತು ಸುರೇಶ್ ಸ್ವಾಮಿ ತಮ್ಮ ಕಾರನ್ನು ಅಡ್ಡ ಗಟ್ಟಿ ನಿಲ್ಲಿಸಿ ರಮೇಶ್ ನಿಗೆ ಮತ್ತು ನನ್ನ ಮಗನಿಗೆ ಹಲ್ಲೆ ಮಾಡಿದ್ದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ*04.10.2020* *--------* ನೀಡಿರುತ್ತೇನೆ ಎಂದು ನನ್ನ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*3* ಎಂದು ಗುರುತಿಸಿದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ</u>

**ಮರು ವಿಚಾರಣೆಃ- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**